Tumbe International e-Magazine
ISSN : 2581-7728
A Multilanguage Magazine
Issue-1
Volume-5
Jan-June: 2022

# ಗೊರವನಹಳ್ಳಿ ಶ್ರೀ ಮಹಾಲಕ್ಷ್ಮಿ ಮಹಾತ್ಮೆ

**ಅಂಜನ ಆರ್ ಜಿ**
U11GT21C0481
ಬಿಕಾಂ ಮೊದಲನೇ ವರ್ಷ, ದ್ವಿತೀಯ ಸೆಮಿಸ್ಟರ್
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು -572104
renukargrenu@gmail.com Ph.no: 9663614905

**ಪರಿಚಯ**



ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನಲ್ಲಿರುವ ಗೊರವನಹಳ್ಳಿ ಲಕ್ಷ್ಮಿದೇವಸ್ಥಾನವು ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದೆ. ಈ ಗ್ರಾಮವು ತನ್ನಲ್ಲಿ ಇರುವ ಲಕ್ಷ್ಮಿದೇವಸ್ಥಾನದಿಂದಾಗಿ ಚಿರಪರಿಚಿತವಾಗಿದೆ. ಲಕ್ಷ್ಮಿ ಎಂದ ಕೂಡಲೇ ನೆನಪಿಗೆ ಬರುವುದು ಕೊಲ್ಹಾಪುರ ಲಕ್ಷ್ಮಿ. ಆದರೆ, ಗೊರವನಹಳ್ಳಿ ಕರ್ನಾಟಕದ ಕೊಲ್ಹಾಪುರವಾಗಿ ಬೆಳೆಯುತ್ತಿದೆ. ಲಕ್ಷ್ಮಿಗೆ ಮೀಸಲಾದ ಕರ್ನಾಟಕದ ಏಕೈಕ ಜನಪ್ರಿಯ ಕ್ಷೇತ್ರವನ್ನುವ ಹಿರಿಮೆಗೆ ಗೂರವನಹಳ್ಳಿ ಪಾತ್ರವಾಗಿದೆ.

ಮಹಾಲಕ್ಷ್ಮಿ. ಅನಾದಿ ಕಾಲದಿಂದಲೂ ತನ್ನ ಭಕ್ತರ ಕಷ್ಟಗಳನ್ನು ನಿವಾರಿಸುತ್ತಾ ಬಂದಿರೋ, ಭಾಗ್ಯಲಕ್ಷ್ಮಿ ಗೊರವನ ಹಳ್ಳಿಯಲ್ಲಿ ನೆಲೆಸುವ ಮೂಲಕ, ಗೊರವನಹಳ್ಳಿಯನ್ನು ಪುಣ್ಯ ಭೂಮಿಯನ್ನಾಗಿ ಮಾಡಿದ ಮಹಾತಾಯಿ. ಗೊರವನ ಹಳ್ಳಿ ಮಹಾಲಕ್ಷ್ಮಿ ಅಂದ್ರೆ ಸಾಕು. ಭಕ್ತಿ ಭಾವ ಉಕ್ಕಿ ಹರಿಯುತ್ತೆ. ಅಮ್ಮಾ ತಾಯಿ ನನ್ನ ಸಂಕಷ್ಟ ದೂರ ಮಾಡಮ್ಮ ಅಂತ ಬೇಡಿಕೊಂಡರೆ ಸಾಕು. ಈ ಮಹಾತಾಯಿ ಅವರನ್ನು ಉದ್ದರಿಸ್ತಾಳೆ. "ಎಲ್ಲರ ಸಂಕಷ್ಟಗಳನ್ನು ನಿವಾರಿಸ್ತಾಳೆ. ಕಲಿಯುಗದಲ್ಲೂ ಕಾಣಿಸಿಕೊಳ್ಳೋ ಈ ಕರುಣಾಮಯಿ, ಕಂಗಾಲದವರಿಗೆ ಕರುಣೆ ತೋರಿ ಕೃಪೆ ನೀಡುತ್ತಾಳೆ. ಇದೇ ಕಾರಣಕ್ಕೆ ಲಕ್ಷಾಂತರ ಮಂದಿ ಈ ಗೊರವನಹಳ್ಳಿಗೆ ಬಂದು ಮಹಾಲಕ್ಷ್ಮಿಯ ಪಾದಕ್ಕೆ ಬಿದ್ದು ಧನ್ಯರಾಗ್ತಾರೆ.

ಈ ದೇವಸ್ಥಾನದಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಹಾಗು ಭಾನುವಾರಗಳಂದು ವಿಶೇಷ ಪೂಜಿ ಇರುತ್ತದೆ. ದೇವಾಲಯದ ವತಿಯಿಂದ ಇಲ್ಲಿ ಪ್ರತಿದಿನ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿದೆ. ದೇವಸ್ಥಾನದವರು ಇಲ್ಲಿ ಒಂದು ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಸಾರ್ವಜನಿಕರು ಅಗತ್ಯ ಹಣವನ್ನು ನೀಡಿ ಇದರ ಉಪಯೋಗ ಪಡೆದುಕೊಳ್ಳಬಹುದು.

**ದೇವಾಲಯ ಮತ್ತು ಅದರ ಇತಿಹಾಸ**

ಮಹಾಲಕ್ಷ್ಮೀ ಈ ಗೊರವನಹಳ್ಳಿಯಲ್ಲಿ ಬಂದು ನೆಲೆಸಿದ್ದರ ಹಿಂದೆ ಒಂದು ರೋಚಕ ಕಥೆ ಇದೆ. ದೇಶದ ಎಲ್ಲ ದೇಗುಲಗಳಂತೆ ಈ ದೇಗುಲಕ್ಕೂ ತನ್ನದೇ ಆದಂತಹ ಒಂದು ಸುಂದರ ಇತಿಹಾಸವಿದೆ. ಈ ದೇಗುಲದಲ್ಲಿ ಪೂಜಿಸಲ್ಪಡುತ್ತಿರುವ ಮಹಾಲಕ್ಷ್ಮೀ ದೇವಿಯ ಮುಖ್ಯ ವಿಗ್ರಹವು ಸ್ವಯಂ ಆವಿರ್ಭವಿಸಿದೆ ಎಂದು ನಂಬಲಾಗಿದೆ. ಸ್ಥಳೀಯ ಇತಿಹಾಸಕಾರರ ಪ್ರಕಾರ, ಈ ದೇಗುಲ ಸುಮಾರು ೨೦೦ ವರ್ಷಗಳ ಇತಿಹಾಸ ಹೊಂದಿದೆ. 1900 ರ ದಶಕದ ಆರಂಭದಲ್ಲಿ, ತುಮಕೂರಿನ ಕೊರಟಗೆರೆ ತಾಲೂಕಿನ ಗೊರವನಹಳ್ಳಿಯಲ್ಲಿ ಅಬ್ಬಯ್ಯ ಎಂಬ ರೈತನು ವಾಸಿಸುತ್ತಿದ್ದನು. ಇವರಿಗೆ ಒಂದು ಹೆಣ್ಣಿನ ಇವರಿಗೆ ಶರೀರವಾಣಿಯೊಂದು ಕೇಳಿಸಿತ್ತು. ನಾನು ನಿಮ್ಮ ಮನೆಗೆ ಬರುತ್ತೀನಿ, ಕರ್ಕೊಂಡು ಹೋಗು ಅಂತ, ಆಶರೀರವಾಣಿ ಹೇಳಿತ್ತು. ಆಶರೀರವಾಣಿ ಪದೇ ಪದೇ ಕೇಳಿಸ್ತಾ ಇತ್ತು. ಇದರಿಂದ ವಿಚಲಿತನಾದ ಅಬ್ಬಯ್ಯ, ತನಗಾದ ಅನುಭವವನ್ನು ತನ್ನ ತಾಯಿಗೆ ಹೇಳಿದರು. ಇನ್ನೊಮ್ಮೆ ಆಶರೀರವಾಣಿ ಕೇಳಿಸಿದರೆ, ನೀನು ದೆವ್ವವಾದ್ರೆ, ಅಲ್ಲೇ ಇರು. ದೇವರಾದ್ರೆ ಬಾ ಅಂತ ಹೇಳು ಅಂತ, ಅಬ್ಬಯ್ಯನ ತಾಯಿ ಹೇಳಿದರು. ತಾಯಿಯ ಮಾತಿಗೆ ಒಪ್ಪಿಕೊಂಡ ಅಬ್ಬಯ್ಯ ತನ್ನ ಕೆಲಸವನ್ನು ಮುಂದುವರೆಸಿದ. ಮತ್ತೆ ಅದೇ ಆಶರೀರವಾಣಿ ಕೇಳಿಸ್ತು ಅಬ್ಬಯ್ಯವಿಗೆ. ತಾಯಿ ಹೇಳಿದಂತೆ, ದೆವ್ವವಾದ್ರೆ ಬರಬೇಡ. ದೇವರಾದ್ರೆ ಬಾ ಅಂತ ಹೇಳಿದ. ಮಹಾಲಕ್ಷ್ಮೀ ಕೊಳದಿಂದ ಎದ್ದು ಬಂದು 'ಅಬ್ಬಯ್ಯನ ಮನೆ ಸೇರಿದಳು. ಆತ ತನ್ನ ಮನೆಯಲ್ಲಿ ಈ ವಿಗ್ರಹವನ್ನು ಪೂಜಿಸಲು ಆರಂಭಿಸಿದನು.

ಆ ಸಂದರ್ಭದಲ್ಲಿ ದೇವಿ ಆತನಿಗೆ ಸಂಪತ್ತು ಮತ್ತು ಸಮೃದ್ಧಿಯನ್ನು ಆಶೀರ್ವದಿಸಿದರು. ತನಗೆ ಅನಾಯಾಸವಾಗಿ ದೊರೆತ ಸಂಪತ್ತನ್ನು ಆತ ದಾನಕ್ಕೆ ವಿನಿಯೋಗಿಸಿದನು. ಈತನ ಸಮಾಜ ಸೇವಯ ಗೌರವಾರ್ಥವಾಗಿ ಆತನ ಮನೆಗೆ ಲಕ್ಷ್ಮೀ ನಿವಾಸ ಎಂದು ಜನ ಹೆಸರಿಟ್ಟಿರು. ಅಬ್ಬಯ್ಯ ಸಹೋದರ ತೋಟದಪ್ಪ ಕೂಡ ಅಬ್ಬಯ್ಯನ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರು. ಆತ ಕೂಡ ಮಹಾಲಕ್ಷ್ಮೀ ದೇವಿಯನ್ನು ಪೂಜಿಸಲಾರಂಭಿಸಿದನು. ಒಂದು ರಾತ್ರಿ ದೇವಿಯು ಅವನ ಕನಸಿನಲ್ಲಿ ಪ್ರತ್ಯಕ್ಷಳಾಗಿ ತನಗೆ ದೇವಾಲಯವನ್ನು ನಿರ್ಮಿಸುವಂತೆ ಆದೇಶ ನೀಡಿದಳು. ಈ ಆದೇಶದ ಪ್ರಕಾರ ಆತ ದೇವಿಗೆ ದೇವಾಲಯವನ್ನು ನಿರ್ಮಿಸಿದನು ಮತ್ತು ಈ ಗುಡಿಯಲ್ಲಿ ವಿಗ್ರಹವನ್ನು ಪೂಜಿಸಲು ಪ್ರಾರಂಭಿಸಿದನು. ತೋಟದಪ್ಪನ ಮರಣದ ನಂತರ, ಚೌಡಯ್ಯ ಎನ್ನುವಾತ ಮಹಾಲಕ್ಷ್ಮೀ ದೇವಿಗೆ ಪೂಜೆಗಳನ್ನು ಮಾಡಲು ಪ್ರಾರಂಭಿಸಿದನು. ಅಂದಿನಿಂದ ಗೊರವನಹಳ್ಳಿ ಪವಿತ್ರ ಪುಣ್ಯ ಕ್ಷೇತ್ರವಾಗಿ ಪರಿವರ್ತನೆಯಾಯಿತು.

ಆದರೆ 1910 ಮತ್ತು 1925 ರ ನಡುವಣ ಹದಿನೈದು ವರ್ಷಗಳ ಕಾಲ ಎನ್ನುವ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಆದರೆ. 1925 ರಲ್ಲಿ, ದೇವಿಯ ಪರಮ ಭಕ್ತೆ ಕಮಲಮ್ಮ ಗೊರವನಹಳ್ಳಿಗೆ ಆಗಮಿಸಿದರು. ಈ ಸಂದರ್ಭದಲ್ಲಿ ದೇಗುಲ ಸುಸ್ಥಿತಿಯಲ್ಲಿ ಇಲ್ಲದಿರುವುದನ್ನು ಕಂಡು ಮಮ್ಮಲ ಮರುಗಿದರು. ಬಳಿಕ, ಅವರು, ದೇವಾಲಯವನ್ನು ಪುನರುಜ್ಜೀವನಗೊಳಿಸಿದರು. ಆ ಬಳಿಕ ದೇವಿಗೆ ಪೂಜೆ ಮರು ಆರಂಭವಾಯಿತು. ಆದರೆ ಕಲವು ಕಾರಣಗಳಿಂದ ಒಂದು ವರ್ಷದ ನಂತರ ಅವರು ಗೊರವನಹಳ್ಳಿ ಬಿಟ್ಟು ತೆರಳಿದರು. ಬಳಿಕ ಸುಮಾರು ೨೬ ವರ್ಷಗಳ ನಂತರ ಅವರು ದೇವಾಲಯಕ್ಕೆ ಮರಳಿ ಬಂದು 1952 ರಲ್ಲಿ ಪುನರ್ ಪೂಜೆ ಆರಂಭಿಸದರು. ಇದರಿಂದಾಗಿ ಮಹಾಲಕ್ಷ್ಮೀ ಸಂತುಷ್ಟಳಾದಳು. ಬೇಡಿ ಬಂದ ಲಕ್ಷಾಂತರ ಮಂದಿ ಭಕ್ತರನ್ನು ಅನುಗ್ರಹಿಸುವ ಮೂಲಕ, ಎಲ್ಲೆಡೆ ಮನೆ ಮಾತಾದಳು. ಇದೇ ಕಾರಣಕ್ಕೆ, ಲಕ್ಷಾಂತರ ಮಂದಿ ಈ ಮಹಾಮಾತೆಯನ್ನು ನೋಡೋಕೆ,

ಗೊರವನಹಳ್ಳಿಗೆ ಬರ್ತಾ ಇದ್ದಾರೆ. ಬಂದ ಭಕ್ತರು ಮಹಾಲಕ್ಷ್ಮಿಗೆ ತಮ್ಮ ಕೈಲಾದ ಕಾಣಿಕೆಯನ್ನು ನೀಡಿ ಹೋಗ್ತಾರೆ. ಚಿನ್ನಾಭರಣಗಳನ್ನು ದೇವಿಗೆ ಅರ್ಪಿಸಿ ಹೋಗ್ತಾರೆ.

ಅಂದಿನಿಂದ ಈ ದೇವಾಲಯವು ಮಹಾಲಕ್ಷ್ಮಿ ದೇವಿಯ ಭಕ್ತರಿಗೆ ತೀರ್ಥಕ್ಷೇತ್ರವಾಯಿತು. ದೇಶದ ಎಲ್ಲ ಕಡೆಗಳಿಂದ, ಅದರಲ್ಲೂ ದಕ್ಷಿಣ ಭಾರತದ ಎಲ್ಲೆಡೆಯಿಂದ ಇಲ್ಲಿಗೆ ದೇವಿ ಭಕ್ತರು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ. ಕಮಲಮ್ಮ ಅವರ ಮರಣಾ ನಂತರ ಅವರ ಪುತ್ರರಾದ ಪ್ರಸನ್ನರವರು ಆಡಳಿತ ನೋಡಿಕೊಳ್ಳುತ್ತಿದ್ದಾರೆ.

**ಇಲ್ಲಿನ ಮಹಾಲಕ್ಷ್ಮೀಯನ್ನು ಪೂಜಿಸಿದ್ರೆ ಸಿರಿವಂತರಾಗ್ತಾರಂತೆ!**

ಮಹಾಲಕ್ಷ್ಮೀ, ಹೆಸರೇ ಸೂಚಿಸುವಂತೆ ಐಶ್ವರ್ಯದ ದೇವತೆ. ಮಹಾಲಕ್ಷ್ಮೀಯನ್ನು ಪೂಜಿಸಿದರೆ ಮನೆಯು ಸದಾ ಧನ, ಸಂಪತ್ತಿವಿಂದ ಕೂಡಿರುತ್ತದೆ ಎನ್ನುತ್ತಾರೆ. ಅಂತಹದ್ದೇ ಒಂದು ಮಹಾಲಕ್ಷ್ಮಿ ದೇವಾಲಯದ ಬಗ್ಗೆ ಇಂದು ನಾವು ತಿಳಿಸಲಿದ್ದೇವೆ. ಈ ಮಹಾಲಕ್ಷ್ಮೀಯನ್ನು ಪೂಜಿಸಿದಲ್ಲಿ ಶ್ರೀಮಂತರಾಗುತ್ತಾರಂತೆ.

**ಲಕ್ಷದಿಪೋತ್ಸವ**

ಈ ದೇವಾಲಯದಲ್ಲಿ ಲಕ್ಷದೀಪೋತ್ಸವವು ಪ್ರಮುಖ ಹಬ್ಬವಾಗಿದೆ. ಕಾರ್ತಿಕ ಮಾಸದಂದು (ನವಂಬರ್ ಕೊನೆ - ಡಿಸೆಂಬರ್ ತಿಂಗಳ ಮೊದಲ ವಾರ) ಲಕ್ಷ್ಮದೀಪೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ.

**ದೇಗುಲದ ವಾಸ್ತುಶಿಲ್ಪ**

ಗೊರವನಹಳ್ಳಿಯ ಶ್ರೀ ಮಹಾಲಕ್ಷ್ಮಿ ದೇವಸ್ಥಾನವು :900 ರ ದಶಕದ ವಿಶಿಷ್ಟವಾದ ದಕ್ಷಿಣ ಭಾರತದ ವಾಸ್ತುಶಿಲ್ಪಕ್ಕೆ ಒಂದು ಸುಂದರ ಉದಾಹರಣೆಯಾಗಿದೆ. ದೇವಾಲಯವು ದೊಡ್ಡದಾದ, ಬಹುವರ್ಣದ ಗೋಪುರವನ್ನು ಹೊಂದಿದೆ ಮತ್ತು ಎರಡೂ ಬದಿಗಳಲ್ಲಿ ಸಣ್ಣ ಕಮಾನುಗಳನ್ನು ಹೊಂದಿದೆ. ದೇವಾಲಯದ ಎರಡೂ ಬದಿಯಲ್ಲಿ ದೊಡ್ಡ ವರಾಂಡ ಇದೆ. ದೇಗುಲದ ಅಧಿದೇವತೆ ಶ್ರೀ ಮಹಾಲಕ್ಷ್ಮಿ, ವಿಗ್ರಹವು ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿದೆ. ಶ್ರೀ ನಾಗದೇವತೆ, ಶ್ರೀ ಮಾರಿಕಾಂಬಾ ದೇವತೆ ದೇಗುಲ ಕೂಡ ಇಲ್ಲಿದೆ.

**ದೇಗುಲ ಭೇಟಿ**

ಈ ದೇವಸ್ಥಾಸವು ವರ್ಷದ ಎಲ್ಲ ದಿನಗಳಲ್ಲೂ ತೆರೆದಿರುತ್ತದೆ. ಆದರೆ ಸೂರ್ಯ ಗ್ರಹಣ- ಚಂದ್ರ ಗ್ರಹಣ ಸಂದರ್ಭದಲ್ಲಿ ಮಾತ್ರ ಇಲ್ಲಿ ಬಾಗಿಲು ಹಾಕಲಾಗುತ್ತದೆ. ಉಳಿದಂತೆ, ಎಲ್ಲ ದಿನಗಲ್ಲು ಸಾರ್ವಜನಿಕರಿಗೆ ದೇಗುಲದ ಬಾಗಿಲು ತೆರೆದಿರುತ್ತದೆ. ಮಂಗಳವಾರ ಮತ್ತು ಶುಕ್ರವಾರ ಶ್ರೀ ಮಹಾಲಕ್ಷ್ಮಿಗೆ ವಿಶೇಷ ದಿನ ಎಂದು ಪರಿಗಣಿಸಲಾಗಿದೆ. ದೇಗುಲದಲ್ಲಿ ಅಭಿಷೇಕ ಮತ್ತು ಕುಂಕುಮಾರ್ಚನೆಯನ್ನು ಬೆಳಿಗ್ಗೆ 8 ರಿಂದ 9.80 ರವರೆಗೆ ಮತ್ತು ಮಹಾ ಮಂಗಳಾರತಿಯನ್ನು ಬೆಳಿಗ್ಗೆ 9:30, ಮಧ್ಯಾಹ್ನ 12:30 ಮತ್ತು ಸಂಜೆ 7:30 ಕ್ಕೆ ಮಾಡಲಾಗುತ್ತದೆ. ದೇವಸ್ಥಾನವನ್ನು ಮಧ್ಯಾಹ್ನ 1೨.30 ರಿಂದ ಸಂಜೆ 5.30 ರವರೆಗೆ ಸಾರ್ವಜನಿಕರ ಭೇಟಿಗೆ ಮುಚ್ಚಲಾಗುತ್ತದೆ.

**ಗೊರವನಹಳ್ಳಿ ಸುತ್ತಲಿನ ಇತರ ಪ್ರವಾಸಿತಾಣಗಳು**

* ತೀತ ಜಲಾಶಯ: ಈ ಜಲಾಶಯ ಸುವರ್ಣಮುಖಿ ನದಿಗೆ ನಿರ್ಮಿಸಲಾಗಿದೆ. ಇದು ದೇಗುಲದ ಸಮೀಪದಲ್ಲಿದೆ. ಈ ಜಲಾಶಯ ಸುತ್ತ ಕಣ್ಮನ ತಣಿಸುವ ಪಕೃತಿ ಸೌಂದರ್ಯವಿದೆ.

* ದೇವಾಲಯಗಳು: ಓಣಿ ನಾಗಪ್ಪ ದೇವಾಲಯ ಮತ್ತು ರೇಣುಕಾಂಬ ದೇವಾಲಯದಂತಹ ಹಲವಾರು ದೇವಾಲಯಗಳು ಶ್ರೀ ಮಹಾಲಕ್ಷ್ಮಿ ದೇವಾಲಯದ ಸುತ್ತ ನಿರ್ಮಾಣಗೊಂಡಿವೆ.

* ಬಂಕಾಪುರ ಸವಿಲು ಅಭಯಾರಣ್ಯ: ಗೊರವನಹಳ್ಳಿ ಯಿಂದ ಸುಮಾರು 300 ಕಿಲೋಮೀಟರ್ ದೂರದಲ್ಲಿ ಸುಂದರವಾದ ಬಂಕಾಪುರ ನವಿಲು ಅಭಯಾರಣ್ಯವಿದೆ. ಈ ಅಭಯಾರಣ್ಯವು 139 ಇಕರೆಗಳಲ್ಲಿ ಹರಡಿ ನಿಂತಿದೆ. ಬಂಕಾಪುರ ಕೋಟೆಯ ಅವಶೇಷಗಳು, ಸಾವಿರಾರು ನವಿಲುಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ.

**ಗೊರವನಹಳ್ಳಿಗೆ ಹೋಗುವ ಮಾರ್ಗ**

ಗೊರವನಹಳ್ಳಿ, ಈಗ ಉತ್ತಮ ರಸ್ತೆ ಸಂಪರ್ಕ ಹೊಂದಿದೆ. ಜೊತೆಗೆ, ರೈಲು ಅಥವಾ ವಿಮಾನದ ಮೂಲಕ ಕೂಡ ಈ ಕ್ಷೇತ್ರವನ್ನು ಸುಲಭವಾಗಿ ತಲುಪಬಹುದು. ಕರ್ನಾಟಕದ ರಾಜಧಾನಿ ಬೆಂಗಳೂರು ಗೊರವನಹಳ್ಳಿಗೆ ಹತ್ತಿರದ ದೊಡ್ಡ ನಗರವಾಗಿದೆ.

- **ವಿಮಾನ ಸಂಪರ್ಕ:** ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ದೇಶೀಯ ಮತ್ತು ಅಂತರಾಷ್ಟ್ರೀಯ ಹೊಂದಿದೆ. ಇಲ್ಲಿಂದ ದೇವಾಲಯಕ್ಕೆ ಕೇವಲ 80 ಕಿ.ಮೀ ದೂರ.
- **ರೈಲು ಸಂಪರ್ಕ:** ಗೊರವನಹಳ್ಳಿಗೆ ಹತ್ತಿರದ. ರೈಲು ನಿಲ್ದಾಣ ತುಮಕೂರು ನಗರ ರೈಲ್ವೆ ನಿಲ್ದಾಣ. ಇಲ್ಲಿಂದ, ದೇವಸ್ಥಾನಕ್ಕೆ ಕೇವಲ 36 ಕಿಮೀ ದೂರ. ಬೆಂಗಳೂರು- ತುಮಕೂರು, ಹುಬ್ಬಳ್ಳಿ- ತುಮಕೂರು ನಡುವ, ದಿನ ಹತ್ತಾರು ರೈಲುಗಳು ಸಂಚರಿಸುತ್ತವೆ.
- **ರಸ್ತೆ ಸಂಪರ್ಕ:** ಬೆಂಗಳೂರು ಮತ್ತು ಗೊರವನಹಳ್ಳಿ ನಡುವೆ ಕೆಎಸ್ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳು ನಿಯಮಿತವಾಗಿ. ಸಂಚರಿಸುತ್ತವೆ. ಪರ್ಯಾಯವಾಗಿ, ನೀವು ಬೆಂಗಳೂರಿನಿಂದ ಕ್ಯಾಬ್ ಬಾಡಿಗೆಗೆ ಆಯ್ಕೆ ಮಾಡಬಹುದು ಅಥವಾ ನೀವೇ ಚಾಲನೆ ಮಾಡಬಹುದು. ಏಕೆಂದರೆ, ಈ ರಸ್ತೆ ಉತ್ತಮವಾಗಿದ್ದು, ಯಾವುದೇ ಸಮಸ್ಯೆ ಇಲ್ಲ.